ಕರ್ನಾಟಕ ಸರ್ಕಾರ

**ಸಂಖ್ಯೆ:** ಡಿಟಿಇ/513/ಎಸಿಎಂ(2)/2017-18

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:15-06-2018.

**-::: ಸುತ್ತೋಲೆ :::-**

**ವಿಷಯ:** **2018-19**ನೇ ಸಾಲಿನ ಪ್ರಥಮ ಡಿಪ್ಲೋಮಾ ಪ್ರವೇಶ ಪ್ರಕ್ರಿಯೆಗೆ ಅಗತ್ಯವಿರುವ ಉಪನ್ಯಾಸಕರು/ಸಿಬ್ಬಂದಿಯವರನ್ನು ಅನ್ಯಕಾರ್ಯನಿಮಿತ್ತ ನಿಯೋಜಿಸಿಕೊಳ್ಳುವ ಬಗ್ಗೆ.

**ಉಲ್ಲೇಖ:** ಹಲವು ನೋಡಲ್ ಸೆಂಟರ್‌ಗಳ ಪ್ರಾಂಶುಪಾಲರ ಮನವಿ

**-0000000-**

**2018-19**ನೇ ಸಾಲಿನ ನೋಡಲ್ ಸೆಂಟರ್‌ಗಳಲ್ಲಿ ನಡೆಯುವ ಪ್ರಥಮ ಡಿಪ್ಲೋಮಾ ಪ್ರವೇಶ ಪ್ರಕ್ರಿಯೆಗೆ ಪ್ರವೇಶ ಕಾರ್ಯಗಳನ್ನು ನಿರ್ವಹಿಸಲು ಉಪನ್ಯಾಸಕರು/ಸಿಬ್ಬಂದಿಗಳ ಕೊರತೆ ಇರುವುದರಿಂದ ಪ್ರವೇಶ ಕಾರ್ಯಗಳನ್ನು ನಿರ್ವಹಿಸಲು ಸಮೀಪ ಇರುವ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್‌ಗಳ ಉಪನ್ಯಾಸಕರು/ಸಿಬ್ಬಂದಿಯವರನ್ನು ನಿಯೋಜಿಸಬೇಕೆಂದು ಹಲವು ನೋಡಲ್ ಸೆಂಟರ್‌ನ ಪ್ರಾಂಶುಪಾಲರು ಉಲ್ಲೇಖಿತ ಪತ್ರದಲ್ಲಿ ಮನವಿ ಕೋರಿರುತ್ತಾರೆ.

ಪ್ರಯುಕ್ತ, ಪ್ರವೇಶ ಪ್ರಕ್ರಿಯೆಯು ಸುಗಮವಾಗಿ ನಡೆಯುವ ನಿಟ್ಟಿನಲ್ಲಿ ಅವಶ್ಯಕತೆ ಇರುವ ಉಪನ್ಯಾಸಕರು/ಸಿಬ್ಬಂದಿಯವರನ್ನು ನೋಡಲ್ ಸೆಂಟರ್‌ನಲ್ಲಿ ಕಾರ್ಯನಿರ್ವಹಿಸಲು ಸಮೀಪ ಇರುವ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಿಂದ ಅನ್ಯಕಾರ್ಯ ನಿಮಿತ್ತ ಪ್ರವೇಶ ಪ್ರಕ್ರಿಯೆ ಮುಗಿಯುವವರೆಗೆ ನಿಯೋಜಿಸಿಕೊಳ್ಳಲು ಈ ಮೂಲಕ ಸೂಚಿಸಲಾಗಿದೆ. ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರು ನೋಡಲ್ ಸೆಂಟರ್‌ನಲ್ಲಿ ಕಾರ್ಯನಿರ್ವಹಿಸಲು ಕೋರಿಕೆಯ ಮೇರೆಗೆ ತಮ್ಮ ಸಂಸ್ಥೆಯ ಉಪನ್ಯಾಸಕರು/ಸಿಬ್ಬಂದಿವರ್ಗದವರನ್ನು ನಿಯೋಜಿಸಿ ಡಿಪ್ಲೋಮಾ ಪ್ರವೇಶ ಪ್ರಕ್ರಿಯೆಗೆ ಸಹಕರಿಸಲು ಈ ಮೂಲಕ ಸೂಚಿಸಿದೆ. ನಿಯೋಜಿಸಿಕೊಂಡ ಉಪನ್ಯಾಸಕರು/ಸಿಬ್ಬಂದಿವರ್ಗದವರ ಮಾಹಿತಿಯ ಪ್ರತಿಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

ನಿರ್ದೇಶಕರು

15/06

**ಇವರಿಗೆ,**

*ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರಿಗೆ - ಮಾಹಿತಿಗಾಗಿ ಹಾಗೂ ಅನುಸರಣೆಗಾಗಿ.*

**ಪ್ರತಿ:-**

1. ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
2. ಜಂಟಿ ನಿರ್ದೇಶಕರು(ಪರೀಕ್ಷೆ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
4. ನಿರ್ದೇಶಕರ ಆಪ್ತಶಾಖೆಗೆ.
5. ಸಂಯೋಜನಾಧಿಕಾರಿಗಳು, ಇ-ಆಡಳಿತ, ತಾಂ.ಶಿ.ನಿ, ಬೆಂಗಳೂರು - ಸದರಿ ಜ್ಞಾಪನವನ್ನು ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸುವುದು.
6. ಇಎಸ್‌ಟಿ(8) ವಿಭಾಗಕ್ಕೆ.
7. ಕಛೇರಿ ಪ್ರತಿ.